INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -04,July-August, 2026
Page No,184-196
Peer -Reviewed, Refereed Journal

# ಎತ್ತಿನ ಹೊಳೆ ಯೋಜನೆಯ ಸಂತ್ರಸ್ಥರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

ಡಾ.ಪೂರ್ಣಿಮ.ಬಿ.[1]

**ಸಾರಾಂಶ**

ಸಕಲ ಜೀವಿಗಳ ಅಸ್ತಿತ್ವಕ್ಕೆ ಅವಶ್ಯಕವಾದ ವಸ್ತುಗಳಲ್ಲಿ ವಾಯುವಿನ ನಂತರ ನೀರು ಕೂಡ ಅತಿ ಮುಖ್ಯವಾದದ್ದು. ನೈಸರ್ಗಿಕ ಸಂಪನ್ಮೂಲಗಳಲ್ಲಿ ನೀರು ಅತ್ಯಮೂಲ್ಯವಾದದು. ಇದೊಂದು ಪುನರ್ ನವೀಕರಣಗೊಳಿಸಬಹುದಾದ ಸಂಪನ್ಮೂಲಗಳು ಮನುಷ್ಯನಿಗೆ ನೀರು ಬಹು ಉಪಯೋಗಿ ಕುಡಿಯಲು ಅಡುಗೆ ಮಾಡಲು ಸ್ವಚ್ಛಗೊಳಿಸಲು ನೀರಾವರಿ ಪೂರೈಕೆ ವಿದ್ಯುತ್ ಶಕ್ತಿ ತಯಾರಿಕೆ ಜಲ ಸಂಚಾರ ಮೀನುಗಾರಿಕೆ ಕೈಗಾರಿಕೆ ಮನರಂಜನೆ ಮುಂತಾದ ಉದ್ದೇಶಗಳಲ್ಲಿ ನೀರು ಉಪಯುಕ್ತ ಹೀಗಾಗಿ ಒಂದು ದೇಶದ ಸಾಮಾಜಿಕ ಆರ್ಥಿಕ ಪ್ರಗತಿಯಲ್ಲಿ ನೀರಿನ ಪಾತ್ರ ಮಹತ್ವವುಳ್ಳದ್ದು. ನೀರಿನ ಪೂರೈಕೆ ಮತ್ತು ಮಾನವನ ಜೀವನ ಕ್ರಮಗಳ ನಡುವೆ ಪರಸ್ಪರ ಸಂಬಂಧವಿದೆ. ಈ ಕಾರಣದಿಂದಲೇ ಪುರಾತನ ನಾಗರಿಕತೆಯು ನದಿ ಕಣಿವೆಗಳಲ್ಲಿ ಬೆಳೆದು ಉನ್ನತ ಮಟ್ಟ ತಲುಪುವುದನ್ನು ಇತಿಹಾಸ ಪುಟದಲ್ಲಿ ತಿಳಿಯಬಹುದು.

ನಮ್ಮ ಭಾರತವು ಪ್ರಪಂಚದ ಅತ್ಯಂತ ಪ್ರಾಚೀನ ರಾಷ್ಟ್ರಗಳಲ್ಲಿ ಒಂದು ಭಾರತವು ಗ್ರೀಕ್ ಚೀನಾ ಬೇಬಿಲೋನಿಯಗಳಂತೆ ಅತ್ಯಂತ ಪ್ರಾಚೀನ ನಾಗರಿಕತೆಯನ್ನುಳ್ಳಾಗಿದೆ. ಭಾರತೀಯ ಸಮಾಜವು ಪ್ರಚಾರವಾದದ್ದು ಮತ್ತು ಅತ್ಯಂತ ಸಂಕೀರ್ಣ ರಚನೆಯುಳ್ಳದಾಗಿದ್ದು ಅದಕ್ಕೆ ಸುಮಾರು 5000 ವರ್ಷಗಳ ಸುದೀರ್ಘ ಇತಿಹಾಸವಿದೆ. ಭಾರತೀಯ ಸಮಾಜವು ನಾಗರಿಕತೆ ಮತ್ತು ಸಂಸ್ಕೃತಿಯ ಆಧಾರವಾಗಿದ್ದು ವಿಶ್ವಕ್ಕೆ ಮಾದರಿಯಾಗಿದೆ.

**ಮುಖ್ಯ ಪದಗಳು:**–ಸಂತ್ರಸ್ಥರು, ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳು, ಎತ್ತಿನಹೊಳೆ ಯೋಜನೆ

**ಪೀಠಿಕೆ .**

ಎತ್ತಿನ ಹೊಳೆ ಯೋಜನೆಯನ್ನು ಕುಡಿಯುವ ನೀರಿನ ದಾಹವನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ಸಂಪೂರ್ಣವಾಗಿ ಕುಸಿದಿರುವ ಚಿಕ್ಕಬಳ್ಳಾಪುರ. ಕೋಲಾರ. ಬೆಂಗಳೂರು ಗ್ರಾಮಾಂತರ.

[1] .ಸಹಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ, ಹಾಸನ ಜಿಲ್ಲೆ.

ತುಮಕೂರು. ರಾಮನಗರ. ಹಳೆಯ ಹಾಸನ. ಈ ಜಿಲ್ಲೆಗಳ ಭಾಗಗಳ 15 ಟಿಎಂಸಿ ನೀರನ್ನು ಕೆರೆಗಳನ್ನು ತುಂಬಿಸಲು ಮತ್ತು 9 ಟಿಎಂಸಿ ನೀರನ್ನು ಕುಡಿಯುವುದಕ್ಕೆ ಪೂರೈಕೆಯನ್ನು ನೀಡಲು ಈ ಎತ್ತಿನಹೊಳೆ ಯೋಜನೆಯನ್ನು ಜಾರಿಗೆ ತರಲಾಗಿದೆ. ಎತ್ತಿನ ಹೊಳೆ ಯೋಜನೆಯು ಪಶ್ಚಿಮ ಘಟ್ಟದ 14 ಹೆಕ್ಟರ್ ಅರಣ್ಯ ಪ್ರದೇಶವನ್ನು ಬಳಕೆ ಮಾಡಿಕೊಂಡು ಈ ಯೋಜನೆಯನ್ನು ಜೀವವೈವಿಧ್ಯತೆ ತಾಣದಲ್ಲಿ ಈ ಯೋಜನೆಯನ್ನು ರೂಪಿಸಿ ಅನುಷ್ಠಾನವನ್ನು ಮಾಡಲಾಗಿದೆ. ಎತ್ತಿನ ಹೊಳೆ ಯೋಜನೆಗೆ ಚಾಲನೆಯನ್ನು ಕಾಮಗಾರಿ ನಡೆಸುವ ಸ್ಥಳದಲ್ಲಿ ಮಾಡುವುದಕ್ಕೆ ಬದಲಾಗಿ ಎತ್ತಿನಹೊಳೆ ಯೋಜನೆಗೆ ಚಾಲನೆಯನ್ನು ಕಾಮಗಾರಿ ನಡೆಸುವ ಸ್ಥಳದಲ್ಲಿ ಮಾಡುವುದಕ್ಕೆ ಎತ್ತಿನಹೊಳೆ ಯೋಜನೆಯ ಕೊನೆಯ ಭಾಗದ ಚಿಕ್ಕಬಳ್ಳಾಪುರದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಎತ್ತಿನಹೊಳೆ ಯೋಜನೆಯ ಕುಡಿಯುವ ನೀರಿನ ಯೋಜನೆ ಎಂದೆ ಹೇಳಬಹುದು. ಅತ್ಯಂತ ಕಡಿಮೆ ಮಳೆಯನ್ನು ಪಡೆಯುವ ಮತ್ತು ಅಂತರ್ಜಲ ಮಟ್ಟವನ್ನು ಸಂಪೂರ್ಣವಾಗಿ ಕುಸಿದಿರುವ ಕೋಲಾರ. ಚಿಕ್ಕಬಳ್ಳಾಪುರ. ತುಮಕೂರು. ಬೆಂಗಳೂರು ಗ್ರಾಮಾಂತರ. ಹಾಗೂ ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವಂತಹ ಯೋಜನೆಯಾಗಿದೆ. ಡಾ. ಪರಮಶಿವಯ್ಯನವರ ನೇತೃತ್ವದಲ್ಲಿ ಈ ಯೋಜನೆಯ ಬಗ್ಗೆ ಅಧ್ಯಯನ ಮಾಡಲು ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಕಾಲುವೆಗಳು ಮೂಲಕ ದಕ್ಷಿಣದಿಂದ ಪೂರ್ವವಾದ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸಲು ಸಮ್ಮತಿಯನ್ನು ನೀಡಿತು. ಈ ಯೋಜನೆಯಲ್ಲಿ ಸುಮಾರು 274 ಕಿಲೋಮೀಟರ್ ಗುರುತ್ವ ಕಾಲುವೆಯನ್ನು ನಿರ್ಮಿಸಲು ಅಂದಾಜಿಸಲಾಗಿದೆ. ಈ ಯೋಜನೆಗೆ ನೇತ್ರಾವತಿಯ ಉಪನದಿಗಳಾದ ವಂಗಡ ಹಳ್ಳ. ಕೆರೆಹೊಳೆ. ಕಾಡುಮನೆ ಮತ್ತು ಎತ್ತಿನಹೊಳೆ ಹೀಗೆ 24 ಟಿಎಂಸಿ ನೀರನ್ನು ಪಡೆಯುವುದರ ಮೂಲಕ ಕುಡಿಯುವ ನೀರಿನ ದಾಹವನ್ನು ನೀಗಿಸಲು ಮುಂದಾಗಿದೆ. ಪಶ್ಚಿಮ ಘಟ್ಟವನ್ನು ಜೀವವೈವಿಧ್ಯತೆಯ ಹೃದಯ ಭಾಗವಾಗಿದೆ ಎಂದು ಗುರುತಿಸಿಕೊಂಡಿದ್ದೇವೆ. ಆದರೂ ಸಹ 14 ಹೆಕ್ಟರ್ ಅರಣ್ಯವನ್ನು ಮತ್ತು ಅರಣ್ಯತರ ಪ್ರದೇಶವನ್ನು ಯೋಜನೆಗೆ ನಿರ್ಧರಿಸಲಾಗಿದೆ. ಈ ಯೋಜನೆಯಿಂದ 5 ಜಿಲ್ಲೆಗಳ 8,600 ಹಳ್ಳಿಗಳು ನೀರನ್ನು ಪಡೆದುಕೊಳ್ಳುತ್ತವೆ.

ಎತ್ತಿನಹೊಳೆ ಯೋಜನೆಗೆ ಪ್ರಸ್ತುತ 12. 912.36 ಕೋಟಿ ರೂಪಾಯಿ ಪರಿಷ್ಕೃತ ಹಣ ಬಿಡುಗಡೆ ಮಾಡಲಾಗಿದೆ. ಯೋಜನೆಯ ಕಾರ್ಯಗಳಿಗೆ ಇದ್ದಂತಹ ಎಲ್ಲಾ ರೀತಿಯ ಅಡೆತಡೆಗಳ ಕಡಿಮೆಯಾಗಿದೆ. ಈ ಯೋಜನೆಯಲ್ಲಿ ಎಂಟು ಚಿಕ್ಕ ಚಿಕ್ಕ ಡ್ಯಾಮ್ಗಳನ್ನು ನಿರ್ಮಿಸಲಾಗಿದೆ. ನಂತರ ಕಾಲುವೆಗಳ ಮೂಲಕ ನೀರನ್ನು ಹರಿಸಿ ತುಮಕೂರಿನ ದೇವರಾಯದುರ್ಗದ ಬಳಿ ದೊಡ್ಡ ಜಲಾಶಯವನ್ನು ನಿರ್ಮಿಸಿಕೊಳ್ಳುವುದರ ಮೂಲಕ ನೀರಿನ ಸಂಗ್ರಹ ಮಾಡುವುದು.

**ಎತ್ತಿನಹೊಳೆ ಯೋಜನೆಯ ಸ್ವರೂಪ**

ಎತ್ತಿನಹೊಳೆ ಯೋಜನೆಯ ಶಂಕು ಸ್ಥಾಪನೆಯನ್ನು ಸಿದ್ದರಾಮಯ್ಯ ಅವರು ಜನತೆಯ ತೀವ್ರ ವಿರೋಧ ಪ್ರತಿಭಟನೆ ಇದ್ದರೂ ಸಹ ಬಯಲು ಸೀಮೆಯ ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಮಹತ್ವಕಾಂಕ್ಷಿ ಎತ್ತಿನಹೊಳೆ ಯೋಜನೆಗೆ ಮಾರ್ಚ್ 3. 2014ರಂದು ಚಿಕ್ಕಬಳ್ಳಾಪುರ ನಗರದ ಹೊರವಲಯದಲ್ಲಿ ವೀರಾಂಜನೇಯ ದೇವಾಲಯದ ಹಿಂಭಾಗದ ಮೈದಾನದಲ್ಲಿ ಸಚಿವ ಸಂಪುಟದ ಅನುಮೋದನೆಯನ್ನು ಪಡೆದುಕೊಂಡು ಶಂಕುಸ್ಥಾಪನೆಯನ್ನು ಮಾಡಿದರು.

ಎತ್ತಿನಹೊಳೆ ಎಂಬುದು ಪ್ರಾರಂಭದಲ್ಲಿ ಪ್ರಾರಂಭದಲ್ಲಿ ಅಗಾನಿಯ ಮುರುಕನ ಗುಡ್ಡದಲ್ಲಿ ಹುಟ್ಟಿ ಎತ್ತಿನಹೊಳೆ ಎಂಬುದಾಗಿ ಹಲವು ಚಲನೆಗಳ ಮೂಲಕ ಹರಿದು ಆರ್ಲೆಯ ಬಳಿ ಎರಡು ಹಳ್ಳಿಗಳ ಒಟ್ಟಾಗಿ ಎತ್ತಿನಹೊಳೆಯಾಗಿ ಹರಿದು ಕೆಂಪು ಹೊಳೆಯನ್ನು ಸೇರುವುದರ ಮೂಲಕ ನೇತ್ರಾವತಿಯನ್ನು ಸೇರುತ್ತಿತ್ತು.

ನೇತ್ರಾವತಿಯ ಎಂಟು ಉಪನದಿಗಳನ್ನು ಎತ್ತಿನ ಹೊಳೆ ಯೋಜನೆಗೆ ಜೋಡಿಸಲಾಗುತ್ತದೆ. ನೇತ್ರಾವತಿಯ ಮೂಲವೆಂದರೆ ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟದಲ್ಲಿ ಕುದುರೆಮುಖದ ಬಳಿ ಸಂಸೆ ಎಂಬಲ್ಲಿ ಉಗಮ ಹೊಂದಿ ಹಲವು ಉಪನದಿಗಳ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿದು ಅರಬ್ಬಿ ಸಮುದ್ರವನ್ನು ಸೇರುವುದು.

ಎತ್ತಿನಹೊಳೆ ಯೋಜನೆಯಲ್ಲಿ ಗುಂಡ್ಯ ನದಿಯ ನೀರನ್ನು ಪೂರ್ವಕ್ಕೆ ತಿರುಗಿಸುವುದರ ಮೂಲಕ ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯಾಗಿದೆ. ಈ ಯೋಜನೆಯಲ್ಲಿ ನೇತ್ರಾವತಿಯ ಉಪನದಿಗಳಾದ ಹೊಂಗಡ ಹಳ್ಳ. ಕೆರೆಹೊಳೆ. ಕಾಡುಮನೆ ಹಳ್ಳ. ಎತ್ತಿನ ಹಳ್ಳ. ಮಾರನಹಳ್ಳಿ. ಹಾಲೋ ಹಳ್ಳ. ಗಿರಿಹೊಳೆ. ಈ ಎಂಟು ಉಪನದಿಗಳ ನೀರನ್ನು ಸಕಲೇಶಪುರದ ಹಾರವನ ಹಳ್ಳದವರೆಗೆ ಏತ ನೀರಾವರಿ ನೀರನ್ನು ಪಂಪ್ ಮಾಡುವುದು 500 ಮೆಗಾ ವ್ಯಾಟ್ ವಿದ್ಯುತ್ತಿನ ಮೂಲಕ ದೊಡ್ಡ ಮೋಟರುಗಳ ಮೂಲಕ ಹರವನಹಳ್ಳ ಬಳಿಯ ವಿತರಣಾ ತೊಟ್ಟಿಗೆ ಬಿಡಲಾಗುವುದು. ನಂತರ ಅರವನಹಳ್ಳಿಯಿಂದ ಕೋಲಾರದವರೆಗೆ ಸುಮಾರು 873 ಕಿಲೋ ಮೀಟರ್ ಉದ್ದದ ಗುರುತ್ವ ಕಾಲುವೆಯನ್ನು ನಿರ್ಮಿಸಲಾಗುತ್ತದೆ. ನಂತರ ತುಮಕೂರಿನ ದೇವರಾಯ ದುರ್ಗಾದ ಬಳಿ ದೊಡ್ಡ ಜಲಾಶಯವನ್ನು ಕಟ್ಟಿಕೊಂಡು ನಂತರ ಜಿಲ್ಲೆಯ ಕೆರೆಗಳನ್ನು ತುಂಬಿಸಲಾಗುವುದು ಎಂಬುದಾಗಿ ಯೋಜನೆಯನ್ನು ರೂಪಿಸಲಾಗಿತ್ತು. ಅತ್ಯಂತ ಕಡಿಮೆ ಮಳೆಯನ್ನು ಪಡೆಯುವ ಮತ್ತು ಅಂತರ್ಜಲ ಮಟ್ಟ ಸಂಪೂರ್ಣ ಕುಸಿದಿರುವ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಹಾಗೂ ಹಾಸನ ಜಿಲ್ಲೆಯ 8,600 ಹಳ್ಳಿಗಳಿಗೆ 9 ಟಿಎಂಸಿ ನೀರನ್ನು ಶೇಕಡ 50ರಷ್ಟು ಕೆರೆಗಳನ್ನು ತುಂಬಿಸಲು ಒಟ್ಟು 24 ಟಿಎಂಸಿ ನೀರನ್ನು ಪಡೆಯುವುದರ ಮೂಲಕ ಅಂತರ್ಜಲ

ಮಟ್ಟವನ್ನು ವೃದ್ಧಿಸುವುದು ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವ ಬಹುದೊಡ್ಡ ಯೋಜನೆಯಾಗಿದೆ.

**ಎತ್ತಿನ ಹೊಳೆ ಯೋಜನೆಯ ವೆಚ್ಚ ಮತ್ತು ಕಾಲಾವಧಿ**

ಎತ್ತಿನಹೊಳೆ ಯೋಜನೆಗಾಗಿ ಮೊದಲನೆಯ ಹಂತಕ್ಕೆ 2011ರಲ್ಲಿ 2800 ಕೋಟಿ ಮತ್ತು ಎರಡನೇ ಹಂತಕ್ಕೆ 8320 ಕೋಟಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಒಟ್ಟು 12.912.36 ಕೋಟಿ ವೆಚ್ಚವಾಗಿದೆ. ಈ ಯೋಜನೆ 2018 ಕೆ ಮುಗಿಯುವುದಾಗಿ ಆಗಿನ ನೀರಾವರಿ ಸಚಿವರಾದ ಎಂ.ಬಿ. ಪಾಟೀಲ್ ತಿಳಿಸಿದ್ದರು. ಆದರೆ ಯೋಜನೆಯ ಪ್ರಸ್ತಾವನೆಯಲ್ಲಿ ಎತ್ತಿನಹೊಳೆ ಯೋಜನೆ 2020ಕ್ಕೆ ಮುಗಿಯುವುದಾಗಿ ಹೇಳಲಾಗಿದೆ. ತಜ್ಞ ಸಮಿತಿಯ ವರದಿಯಲ್ಲಿ 2023ಕ್ಕೆ ಮುಗಿಯಲಿದೆ ಎಂಬ ಅಂದಾಜು ಲೆಕ್ಕಾಚಾರ ದಾಖಿಸಲಾಗಿದೆ. ಅಂದರೆ ಈ ಎಂಟು ವರ್ಷಗಳಲ್ಲಿ ಯೋಜನೆಯ ವೆಚ್ಚ ಇನ್ನೂ ಹೆಚ್ಚಾಗಬಹುದು ಎಲ್ಲರ ಕಲ್ಪನೆಗೂ ನಿಲುಕದ ದೊಡ್ಡ ಮೊತ್ತದ ಹಣ ಈ ಯೋಜನೆಗೆ ಖರ್ಚಾಗಲಿದೆ ಎಂಬುವುದು ಪರಿಸರ ತಜ್ಞರ ಅಭಿಪ್ರಾಯವಾಗಿದೆ.

ಈ ಯೋಜನೆಯಿಂದ ಬಹು ಉಪಯೋಗಗಳಿದ್ದರೂ ಕೆಲವು ನ್ಯೂನ್ಯತೆಗಳಿಂದ ಕೂಡಿದೆ ಎಂದು ತಿಳಿದು ಬಂದಿರುತ್ತದೆ. ಈ ಪ್ರದೇಶದ ಅರಣ್ಯ ಕೃಷಿ ಭೂಮಿ ಮತ್ತು ಜನವಸತಿಯ ಸಮಸ್ಯೆಯನ್ನು ಎದುರಿಸುವಂತಾಗಿದೆ. ಅರಣ್ಯ ನಾಶ, ಕೃಷಿ ಭೂಮಿ, ಅನೇಕ ಜನರು ತಮ್ಮ ಮೂಲ ವಸತಿಗಳನ್ನು ಕಳೆದುಕೊಳ್ಳುವಂತಾಗಿದೆ. ಈ ಎತ್ತಿನ ಹೊಳೆ ಯೋಜನೆಯಿಂದ ತಮ್ಮ ಕೃಷಿ ಜಮೀನು ಮನೆಯನ್ನು ಕಳೆದುಕೊಂಡು ಅನೇಕ ಜನರು ಸಂತ್ರಸ್ತರಾಗಿದ್ದಾರೆ. ಈ ಸಂತ್ರಸ್ತ ಸಮುದಾಯ ಕುರಿತು ತಿಳಿದುಕೊಳ್ಳಲು ಈ ಅಧ್ಯಯನ ಕೈಗೊಳ್ಳಲಾಗಿದೆ.

**ಉದ್ದೇಶಗಳು**

ಎತ್ತಿನಹೊಳೆ ಯೋಜನೆಯಲ್ಲಿ ಸಂತ್ರಸ್ತರ ಕುರಿತಾದ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ಒಳಗೊಂಡಿದೆ.

1.ಎತ್ತಿನಹೊಳೆ ಯೋಜನೆಯ ಸ್ವರೂಪವನ್ನು ತಿಳಿದುಕೊಳ್ಳುವುದು.

2.ಈ ಯೋಜನೆಯ ಅನುಕೂಲತೆ ಮತ್ತು ಅನಾನುಕೂಲತೆಗಳನ್ನು ತಿಳಿದುಕೊಳ್ಳುವುದು.

3.ಈ ಯೋಜನೆ ಸಂತ್ರಸ್ತ ಸಮುದಾಯದ ಸೃಷ್ಟಿಗೆ ಕಾರಣವಾದ ಅಂಶಗಳನ್ನು ಕಂಡುಕೊಳ್ಳುವುದು.

4.ಎತ್ತಿನ ಹೊಳೆ ಯೋಜನೆಯು ಸಂತ್ರಸ್ತರ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಬೀರಿರುವ ಪರಿಣಾಮಗಳನ್ನು ಗುರುತಿಸುವುದು.

5.ಸಂತ್ರಸ್ತರ ಪುನರ್ವಸತೀಕರಣಕ್ಕೆ ಸರ್ಕಾರದ ಕ್ರಮಗಳನ್ನು ಅಧ್ಯಯನ ಮಾಡುವುಉದು

**ಸಂಶೋಧನಾ ವಿಧಾನಗಳು**

ಪ್ರಸ್ತುತ ಈ ಅಧ್ಯಯನವು ಹಾಸನ ಜಿಲ್ಲೆಯ ಆಲೂರು ತಾಲೂಕಿನ ಎತ್ತಿನಹೊಳೆ ಯೋಜನೆಯ ಸಂತ್ರಸ್ತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಕಂಡುಕೊಳ್ಳಲು ನಡೆಸಲಾಗಿದೆ. ಈ ಅಧ್ಯಯನದಲ್ಲಿ ಸಾಮಾಜಿಕ ಸಂಶೋಧನಾ ವಿಧಾನವಾದ ಅವಲೋಕನ ವಿಶೇಷವಾಗಿ ಸಹಭಾಗಿ ಅವಲೋಕ, ಸಂದರ್ಶನ, ಪ್ರಶ್ನಾವಳಿ ಹಾಗೂ ಸರಳ ಯಾದೃಚ್ಚಿಕ ಮಾದರಿ ವಿಧಾನಗಳನ್ನು ಬಳಸಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಿ, ಸಂಗ್ರಹಿಸಿದ ದತ್ತಾಂಶಗಳನ್ನು ಸಂಖ್ಯಾಶಾಸ್ತ್ರದ ನಿಯಮ ಹಾಗೂ ಪದ್ಧತಿಗಳಡಿ ಕೋಷ್ಟಕಗಳನ್ನು ತಯಾರಿಸಿ ವಿಶ್ಲೇಷಣೆ ಮಾಡಲಾಗಿದೆ.

**ಎತ್ತಿನಹೊಳೆ ನೀರಾವರಿ ಯೋಜನೆ ಸಂತ್ರಸ್ತರು ಎದುರಿಸುತ್ತಿರುವ ಸಮಸ್ಯೆಗಳು**

ಎತ್ತಿನಹೊಳೆ ಯೋಜನೆಯಿಂದ ಸಂತ್ರಸ್ತರು ತಮ್ಮ ಜೀವನಕ್ಕಾಗಿ ಹಾಗೂ ಕುಟುಂಬದ ಸದಸ್ಯರ ಭವಿಷ್ಯಕ್ಕಾಗಿ ತಮ್ಮ ಜಮೀನನ್ನೇ ನಂಬಿಕೊಂಡು ಬದುಕುತ್ತಿದ್ದ ಸಂತ್ರಸ್ತರು ಈ ಯೋಜನೆಯಿಂದ ಹೆಚ್ಚಿನ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಎತ್ತಿನ ಹೊಳೆ ಯೋಜನೆಯಿಂದ ಸಂತ್ರಸ್ತರು ತಮ್ಮ ಜಮೀನುಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳನ್ನು ಬೆಳೆಯದೆ ಆಹಾರ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬಂದಿದೆ. ತಮ್ಮ ಜೀವನವನ್ನು ವ್ಯವಸಾಯದಿಂದ ಸಾಗಿಸುತ್ತಿದ್ದು ಈ ಯೋಜನೆಯು ಜಾರಿಯಾದ ಬಳಿಕ ಸಂತ್ರಸ್ಥರು ಬೇರೆ ಯಾವುದೇ ಸೌಲಭ್ಯಗಳನ್ನು ಪಡೆಯದೆ ವಂಚಿತರಾಗಿ ವಸತಿ ಹಾಗೂ ಆಹಾರ ಸಮಸ್ಯೆಯನ್ನು ಹೆಚ್ಚಾಗಿ ಅನುಭವಿಸುತ್ತಿದ್ದಾರೆ. ಸಂತ್ರಸ್ತರು ಈ ಯೋಜನೆಯನ್ನು ಬೆಂಬಲಿಸದೆ ಇದ್ದರೂ ವಿರೋಧವಾಗಿ ಪ್ರತಿಭಟನೆಗಳು ನಡೆದರೂ ಸಹ ಅವರ ಸಮಸ್ಯೆಗಳಿಗೆ ಬೆಲೆ ನೀಡದೆ ಅವರಿಗೆ ಸರಿಯಾದ ಪ್ರಮಾಣದ ಭೂಮಿ ಅಥವಾ ವಸತಿ ಮತ್ತು ಕಳೆದುಕೊಂಡಿರುವ ಭೂಮಿಗೆ ಸರಿಯಾದ ರೀತಿಯಲ್ಲಿ ಹಣವನ್ನು ನೀಡದೆ ಯಾವುದೇ ಸೌಲಭ್ಯಗಳನ್ನು ಪಡೆಯಲು ಸಾಧ್ಯವಿಲ್ಲದೆ ಸಾಕಷ್ಟು ಸಮಸ್ಯೆಗಳು ಹಾಗೂ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ.

**ಕೋಷ್ಟಕ–1**

**ಎತ್ತಿನಹೊಳೆ ಯೋಜನೆಯ ಅನಾನುಕೂಲಗಳನ್ನು ತೋರಿಸುವ ಕೋಷ್ಟಕ**

| ಕ್ರಮ ಸಂಖ್ಯೆ | ಅನಾನುಕೂಲಗಳು | ಆವೃತ್ತಿ | ಶೇಕಡ |
|---|---|---|---|
| 1 | ಪರಿಸರ ನಾಶ | 6 | 12% |
| 2 | ಅರಣ್ಯ ನಾಶ | 10 | 20% |
| 3 | ಜನವಸತಿ ಸಮಸ್ಯೆ | 10 | 20% |
| 4 | ಪರ್ಯಾಯಭೂಮಿ ಕಂಡುಕೊಳ್ಳುವ ಸಮಸ್ಯೆ | 12 | 24% |
| 5 | ಹೊಸ ಜೀವನ ನಿರ್ವಹಣೆಯ ಮಾರ್ಗವನ್ನು ಕಂಡುಕೊಳ್ಳುವ ಸಮಸ್ಯೆ | 10 | 20% |
| 6 | ಮಣ್ಣಿನ ಫಲವತ್ತತೆ ಹಾಳಾಗಬಹುದು | 10 | 20% |

ಈ ಮೇಲಿನ ಪಟ್ಟಿಯಲ್ಲಿ ಎತ್ತಿನಹೊಳೆ ಯೋಜನೆಯ ಅನಾನುಕೂಲಗಳ ಬಗ್ಗೆ ಒಟ್ಟಾರೆ ಅಭಿಪ್ರಾಯದ ಮಾಹಿತಿಯನ್ನು ತಿಳಿಸಲಾಗಿದೆ. ಪರ್ಯಾಯ ಭೂಮಿ ಕಂಡುಕೊಳ್ಳುವ ಸಮಸ್ಯೆ ಎಂಬುವವರು 24% ಇದ್ದರೆ ಅರಣ್ಯ ನಾಶ ಎಂಬುವರ ಪ್ರಮಾಣ 20% ಮಣ್ಣಿನ ಫಲವತ್ತತೆ ಹಾಳಾಗಬಹುದೇ ಎಂಬುದಾಗಿ 20% ಹೊಸ ಜೀವನ ನಿರ್ವಹಣೆ ಮಾರ್ಗವನ್ನು ಕಂಡುಕೊಳ್ಳುವ ಸಮಸ್ಯೆ ಎಂಬುವವರು 20% ಮಣ್ಣಿನ ಫಲವತ್ತತೆ ನಾಶ ಎಂಬುವವರ ಪ್ರಮಾಣ 20% ಪರಿಸರ ಹಾನಿ ಎಂಬುವವರ ಅವರ ಪ್ರಮಾಣ 12% ಕಂಡುಬಂದಿದೆ.

ಈ ಪಟ್ಟಿಯಿಂದ ತಿಳಿದುಬರುವುದೇನೆಂದರೆ ಶೇಕಡ 60 ಪ್ರತಿವರ್ತಿಗಳು ಸಂಪತ್ತು ಬರಿತ ಭೂಮಿ ನಾಶ ಎಂಬುದಾಗಿ ಶೇಕಡ 36 ಪ್ರತಿವರ್ತಿಗಳು ಕೃಷಿ ಭೂಮಿ ನಾಶ ಎಂಬುದಾಗಿ ಶೇಕಡ 24 ಜನರು ಪ್ರಕೃತಿಗೆ ವಿರೋಧವಾದ ಯೋಜನೆ ಎಂದು ತಿಳಿಸಿದ್ದಾರೆ.

ಎತ್ತಿನಹೊಳೆ ನೀರಾವರಿ ಯೋಜನೆಯಿಂದ ಸಂತ್ರಸ್ತರು ಪರ್ಯಾಯಭೂಮಿ ಕಂಡುಕೊಳ್ಳುವ ಸಮಸ್ಯೆ ಸಂಖ್ಯೆ ಪ್ರಮಾಣ ಅಧಿಕವಾಗಿದೆ.

**ಕೋಷ್ಟಕ–2**

ಎತ್ತಿನಹೊಳೆ ಯೋಜನೆಯಿಂದ ಸಂತ್ರಸ್ತರಾಗಿರುವ ಜನತೆಯ ಬೇಡಿಕೆಗಳಿಗೆ ಮನ್ನಣೆ ನೀಡಲಾಗಿದೆಯೇ ಅಥವಾ ಇಲ್ಲವೆ ಎಂಬುದನ್ನು ತೋರಿಸುವ ಕೋಷ್ಟಕ

| ಕ್ರಮ ಸಂಖ್ಯೆ | ಮನ್ನಣೆ ನೀಡಲಾಗಿದೆಯೇ | ಆವೃತ್ತಿ | ಶೇಕಡ |
|---|---|---|---|
| 1 | ಹೌದು | 20 | 40% |
| 2 | ಇಲ್ಲ | 30 | 60% |
| 3 | ಒಟ್ಟು | 50 | 100% |

ಈ ಪಟ್ಟಿಯಲ್ಲಿ ಮನ್ನಣೆ ನೀಡಿಲ್ಲ ಎಂಬುವರ ಪ್ರಮಾಣ 60% ಇದ್ದರೆ ಮನ್ನಣೆ ನೀಡಲಾಗಿದೆ. ಎಂಬುವವರು 40% ಎಂಬುದಾಗಿ ತಿಳಿಸಲಾಗಿದೆ

ಎತ್ತಿನ ಹೊಳೆ ನೀರಾವರಿ ಯೋಜನೆಯ ಸಂತ್ರಸ್ತರ ಬೇಡಿಕೆಗಳಿಗೆ ಮನ್ನಣೆ ನೀಡಿಲ್ಲ ಎಂಬುವವರ ಸಂಖ್ಯೆ ಪ್ರಮಾಣ ಅಧಿಕವಾಗಿದೆ.

**ಕೋಷ್ಟಕ–3**

**ಎತ್ತಿನಹೊಳೆ ಯೋಜನೆ ಸಂತ್ರಸ್ತರಿಗೆ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಹಣ ಬಿಡುಗಡೆ ಮಾಡಿದೆ** ಎಂಬುದರ ಬಗ್ಗೆ ಮಾಹಿತಿ ದೊರೆತಿದೆಯೇ ಅಥವಾ ಇಲ್ಲವೇ ಎಂಬ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ತೋರಿಸುವ ಕೋಷ್ಟಕ

| ಕ್ರಮ ಸಂಖ್ಯೆ | ಆಯವ್ಯಯ ಮಾಹಿತಿ | ಆವೃತ್ತಿ | ಶೇಕಡ |
|---|---|---|---|
| 1 | ದೊರೆತಿದೆ | 4 | 8% |
| 2 | ದೊರೆತಿಲ್ಲ | 25 | 50% |
| 3 | ಮಾಹಿತಿ ಇಲ್ಲ | 21 | 42% |
| 4 | ಒಟ್ಟು | 50 | 100% |

ಈ ಮೇಲಿನ ಕೋಷ್ಟಕದಲ್ಲಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣದ ಮಾಹಿತಿ ಎತ್ತಿನ ಹೊಳೆ ಯೋಜನೆಯ ಸಂತ್ರಸ್ಥರಿಗಾಗಿ ಸಂಗ್ರಹಿಸಲಾಗಿದೆ. ದೊರೆತಿಲ್ಲ ಎಂಬುವರ ಪ್ರಮಾಣ ಶೇಕಡ 50 ಇದ್ದರೆ ಮಾಹಿತಿ ಇಲ್ಲ ಎಂಬುವವರ ಪ್ರಮಾಣ ಶೇಕಡ 42 ಇದೆ ದೊರೆತಿದೆ ಎಂಬುವರ ಪ್ರಮಾಣ ಶೇಕಡ 8ರಷ್ಟಿದೆ. ಎತ್ತಿನಹೊಳೆ ನೀರಾವರಿ ಯೋಜನೆ ಸಂತ್ರಸ್ತರಿಗೆ ರಾಜ್ಯ ಸರ್ಕಾರ ಆಯವ್ಯದಲ್ಲಿ ಹಣ ಬಿಡುಗಡೆ ಮಾಡಿದೆ ಇದರ ಬಗ್ಗೆ ಮಾಹಿತಿ ಇಲ್ಲ ಎಂಬುವವರ ಸಂಖ್ಯಾ ಪ್ರಮಾಣ ಅಧಿಕವಾಗಿದೆ.

**ವಿಶ್ಲೇಷಣೆ**

**ಪರಿಸರದ ಮೇಲೆ ಹೆಚ್ಚು ಅನಾನುಕೂಲ ಪರಿಣಾಮವಾಗುತ್ತದೆ**

ಪ್ರಪಂಚದ 12 ಅತಿ ಪ್ರಮುಖ ಜೀವವೈವಿಧ್ಯತೆಯ ತಾಣದಲ್ಲಿ ಪಶ್ಚಿಮ ಘಟ್ಟವು ಒಂದಾಗಿದೆ. ಇಲ್ಲಿ ವಿಭಿನ್ನತೆಯಿಂದ ಕೂಡಿರುವ ಜೀವಿಗಳಿವೆ. ಪಶ್ಚಿಮ ಘಟ್ಟದಲ್ಲಿಯೇ ನದಿಗಳು ಉಗಮವಾಗುವುದರಿಂದ ದಕ್ಷಿಣ ಭಾರತದ ನೀರಿನ ತೊಟ್ಟಿ ಎಂದು ಕರೆಯುತ್ತೇವೆ. ಮಳೆಯ ಮಾರುತವನ್ನು ತಡೆದು ಘಟ್ಟ ಪ್ರದೇಶದಲ್ಲಿ 250 ರಿಂದ 300 ಇಂಚುಗಳಷ್ಟು ಸರಾಸರಿ ವಾರ್ಷಿಕ ಮಳೆ ಆಗುತ್ತದೆ. ಈ ರೀತಿ ಮಳೆ ಬರುವುದರಿಂದ ಪಶ್ಚಿಮ ಘಟ್ಟದ ನದಿಗಳು ಜೀವಂತವಾಗಿವೆ. ಪಶ್ಚಿಮ ಘಟ್ಟ ಮಹಾರಾಷ್ಟ್ರ ಗುಜರಾತ್ ನ ತೃಪ್ತಿ ನದಿಯಿಂದ ಆರಂಭವಾಗಿ ಕನ್ಯಾಕುಮಾರಿಯವರೆಗೆ ವ್ಯಾಪಿಸಿ 1600 ಕಿಲೋಮೀಟರ್ ಇದೆ. ಪಾಲ್ ಘಟ್ಟದಲ್ಲಿ ಪ್ರಮುಖವಾಗಿ 58 ನದಿಗಳಲ್ಲಿ 47 ನದಿಗಳು ಪೂರ್ವಕ್ಕೆ ಹರಿಯುತ್ತವೆ. ಪಶ್ಚಿಮಕ್ಕೆ ಎಂಟು ನದಿಗಳು ಹರಿಯುತ್ತವೆ. ದಕ್ಷಿಣಕ್ಕೆ 3 ನದಿಗಳು ಮಾತ್ರ ಹರಿಯುತ್ತದೆ. ನೇತ್ರಾವತಿಗೆ ಪ್ರಮುಖವಾಗಿ ಮೂರು ಉಪನದಿಗಳಿವೆ. ಅವುಗಳೆಂದರೆ ಗುಂಡ್ಯ ಹೊಳೆ . ಕುಮಾರಧಾರ. ಎಳನೀರ ಹೊಳೆ. ಎತ್ತಿನ ಹೊಳೆ ಯೋಜನೆ, ಗುಂಡ್ಯ ಹೊಳೆಗಳಲ್ಲಿ ಬರುವಂತಹ ಹೊಳೆಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ಈ

ಯೋಜನೆಗೆ ನೇತ್ರಾವತಿಯ ಉಪನದಿ ಗುಂಡ್ಯಾ ಹೊಳೆಯನ್ನು ಬಳಕೆ ಮಾಡುವುದರಿಂದ ನೇತ್ರಾವತಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತದೆ.

ಪಶ್ಚಿಮ ಘಟ್ಟದಲ್ಲಿ ವಿವಿಧ ಜಾತಿಯ ಅಪರಿಮಿತ ಸಸ್ಯವರ್ಗವಿದೆ. ವಿವಿಧ ಕಾಯಿಲೆಗಳಿಗೆ ಅವಶ್ಯಕವಾಗಿರುವ ವಿಭಿನ್ನ ಜಾತಿಯ ಔಷಧಿಯ ಸಸ್ಯಗಳು ಅಡಕವಾಗಿವೆ. ಕಲ್ಪನೆ ಮಾಡಲು ಸಾಧ್ಯವಿಲ್ಲದಷ್ಟು ಸಸ್ಯವರ್ಗಗಳು ಎತ್ತಿನ ಹೊಳೆ ಯೋಜನೆಯಿಂದ ನಾಶವಾಗುತ್ತಿವೆ. ಪಶ್ಚಿಮ ಘಟ್ಟದಲ್ಲಿರುವ ಸಸ್ಯವರ್ಗಗಳು ಒಂದು ಸಲ ನಶಿಸಿ ಹೋದರೆ ಪುನಃ ಅವುಗಳ ಸಂತತಿಯನ್ನು ಬೆಳೆಸಲು ಸಾಧ್ಯವಿಲ್ಲ. ಎತ್ತಿನ ಹೊಳೆ ಯೋಜನೆಯಿಂದ ಅರಣ್ಯ ಇಲಾಖೆ ಪ್ರಕಾರ ಅರಣ್ಯ ಪ್ರದೇಶದಲ್ಲಿ 4995 ಮರಗಳು 1962 ಬಿದಿರುಗಳು ಹೋಗುತ್ತವೆ. 14 ಹೆಕ್ಟೇರ್ ಅರಣ್ಯ ಪ್ರದೇಶ ನಾಶವಾಗುತ್ತದೆ. ಅರಣ್ಯೇತ್ತರ. ಪ್ರದೇಶ ಸೇರಿ ಸುಮಾರು 520.09 ಎಕರೆ ನಾಶವಾಗುತ್ತದೆ. ಎಂಬ ಅಂದಾಜು ಮಾಡಲಾಗಿದೆ. ಪಶ್ಚಿಮದಲ್ಲಿ ಹುಟ್ಟಿ ಬೆಳೆಯುವ ಸಸ್ಯವರ್ಗ ಬೇರೆ ಬೇರೆ ಪ್ರದೇಶದಲ್ಲಿ ಸೃಷ್ಟಿ ಮಾಡುವುದಕ್ಕೆ ಸಾಧ್ಯವೇ ಇಲ್ಲವಾಗಿದೆ. ಪಶ್ಚಿಮದ ಅರಣ್ಯವನ್ನು ಮತ್ತು ಅರಣ್ಯ ಪ್ರದೇಶವನ್ನು ಮತ್ತು ಇತರೆ ಜನವಸತಿ ಪ್ರದೇಶಗಳು ಸೇರಿದಂತೆ ಇತರೆ ಪ್ರದೇಶಗಳನ್ನು ನಾಶ ಮಾಡುವುದರಿಂದ ತಾಪಮಾನದಲ್ಲಿ ವಿಪರೀತವಾದ ಬದಲಾವಣೆಗಳು ಆಗುತ್ತಿದೆ. ಅರಣ್ಯ ನೀತಿ ಪ್ರಕಾರ ಪ್ರತಿಯೊಂದು ರಾಜ್ಯವು 33 % ಅರಣ್ಯವನ್ನು ಹೊಂದಿರಬೇಕು ಎಂದು ನಿಯಮವಿದೆ. ಆದರೆ ಕರ್ನಾಟಕದಲ್ಲಿರುವಂತಹ ಅರಣ್ಯ ಪ್ರದೇಶ 19% ಮಾತ್ರವಾಗಿದೆ. ಎತ್ತಿನಹೊಳೆ ಪೈಪ್ ಲೈನ್ ಯೋಜನೆಯಿಂದ ಅಪರೂಪದ ದೈತ್ಯ ಮರಗಳು ನಾಶವಾಗುವ ಮೂಲಕ ಪರಿಸರದ ಮೇಲೆ ಕಠೋರವಾದ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂಬುದು ಅಧ್ಯಯನದಿಂದ ಹೊರಹೊಮ್ಮಿದೆ.

**ಜೀವಿಗಳ ಮೇಲೆ ಅಪಾಯಕಾರಿ ಪರಿಣಾಮವಾಗುತ್ತಿದೆ.**

ಮಲೆನಾಡಿನಲ್ಲಿನ ಪ್ರದೇಶದಲ್ಲಿ ಈಗಾಗಲೇ ಅನೇಕ ಸಮಸ್ಯೆಗಳು ಉದ್ಭವವಾಗಿವೆ. ಅರಣ್ಯ ನಾಶದ ಪರಿಣಾಮವಾಗಿ ಆನೆ. ಕಾಡುಕೋಣ. ಹುಲಿ. ಚಿರತೆ. ಕಾಡು ಹಂದಿ. ಕಡವೆಗಳು. ಮುಳ್ಳು ಹಂದಿ. ಹೆಬ್ಬಾವು ನವಿಲು ಇತ್ಯಾದಿ ಜೀವಿಗಳು ಪಶ್ಚಿಮ ಘಟ್ಟದಲ್ಲಿದೆ. ಇವುಗಳಲ್ಲಿ ಈಗಾಗಲೇ ಕೆಲವು ಅಳಿವಿನಂಚಿನಲ್ಲಿವೆ ಇವುಗಳನ್ನು ರಕ್ಷಿಸುವ ಬದಲು ಯೋಜನೆಗಳನ್ನು ರೂಪಿಸಿ ನಾಶ ಮಾಡುತ್ತಿರುವುದು ಸರಿಯಾದ ಅಂಶವಾಗಿಲ್ಲ. ವನ್ಯಜೀವಿಗಳು ರಾಷ್ಟ್ರದ ಸಂಪತ್ತು ಎಂಬುದಾಗಿ ಇಂಡಿಯನ್ ಪೀನಲ್ ಕೋಡ್ ನಲ್ಲಿ ಪ್ರತಿಪಾದಿಸಲಾಗಿದೆ. ಸಂವಿಧಾನದ ಮೂಲಭೂತ ಕರ್ತವ್ಯಗಳಲ್ಲಿ 6ನೇಯ ಮೂಲಭೂತ ಕರ್ತವ್ಯವಾಗಿ ಪ್ರಕೃತಿ. ಅರಣ್ಯ ನದಿ ಸರೋವರಗಳು ವನ್ಯಜೀವಿಗಳನ್ನು ರಕ್ಷಿಸಬೇಕು ಎಂಬುದಾಗಿ ವಿವರಿಸಿದ್ದರೂ ಸಹ ಯೋಜನೆಯಲ್ಲಿ ವಿವಿಧ ಅಂಶವನ್ನು ಮರೆಮಾಚಿ ಒಂದೇ ಉದ್ದೇಶವನ್ನು ಎತ್ತಿ ಹಿಡಿದು ಯೋಜನೆಯನ್ನು ರೂಪಿಸಿರುವುದು ಕಾನೂನುಬಾಹಿರವಾಗಿದೆ ರಾಜ್ಯ ನಿರ್ದೇಶಕ ತತ್ವ 48 ರಲ್ಲಿ

ಪರಿಸರವನ್ನು ಸಂರಕ್ಷಿಸಿ ವನ್ಯ ಜೀವಿಗಳ ಸಂರಕ್ಷಣೆ ಮಾಡಬೇಕು ಎಂಬುದಾಗಿ ವಿವರಿಸಲಾಗಿದೆ. ಜೊತೆಗೆ ಮಾನವ ಮತ್ತು ಕಾಡುಪ್ರಾಣಿ ಸಂಘರ್ಷ ಹೆಚ್ಚುತ್ತಿದೆ.

**ಎತ್ತಿನಹೊಳೆ ಯೋಜನೆ ಅವೈಜ್ಞಾನಿಕವಾಗಿದೆ**

ಎತ್ತಿನ ಹೊಳೆ ಯೋಜನೆಗೆ ರೂಪಿಸಿರುವಂತಹ 8 ಚೆಕ್ ಡ್ಯಾಮ್ ಗಳು ಅವು ದೊಡ್ಡ ಅಣೆಕಟ್ಟುಗಳು ಎಂದು ಕರೆಯಬಹುದು. ಏಕೆಂದರೆ ಈಗಾಗಲೇ ರೂಪಿಸಿರುವ ಚೆಕ್ ಡ್ಯಾಮ್ ರೀತಿ ಅಲ್ಲ. ಅದು 33 ಅಡಿ ಆಳವಾಗಿದೆ ಆದ್ದರಿಂದ ಅದನ್ನು ಅಣೆಕಟ್ಟು ಎಂದು ಕರೆಯುತ್ತೇವೆ. 8 ಅಣೆಕಟ್ಟುಗಳನ್ನು ನಿರ್ಮಾಣ ಮಾಡಿ ಸುಮಾರು 246 ಕಿ.ಮೀ ಕಾಲುವೆಯಾಗಿದೆ. ಸಕಲೇಶಪುರದ ಹರವನಹಳ್ಳಿಯವರೆಗೆ ಏತ ನೀರಾವರಿಯಾಗಿದೆ. ಈ ಪ್ರದೇಶದಲ್ಲಿ ನೀರನ್ನು ಮೇಲೆತ್ತಲು ತಾಂತ್ರಿಕತೆಯ ನಿಖರವಾಗಿಲ್ಲವಾಗಿದೆ.

ಕಾಮಗಾರಿ ಆರಂಭಗೊಂಡಿದ್ದರೂ ಸಹ ಎತ್ತಿನಹೊಳೆ ಯೋಜನೆ ಮೂಲಕ ಕೆರೆಗಳನ್ನು ತುಂಬಿಸಲು ಸುಮಾರು 800 ಕಿಲೋಮೀಟರ್ ಪೈಪ್ ಲೈನ್ ಅವಶ್ಯಕತೆ ಇದೆ. ಎತ್ತಿನಹೊಳೆ ಯೋಜನೆಗೆ ನೀರಾವರಿ ನಿಗಮ ನಿಯಮಿತದ ಪ್ರಕಾರ 274 ಮೆಗಾ ವ್ಯಾಟ್ ವಿದ್ಯುತ್ ಬೇಕು ಎಂದಿದ್ದಾರೆ. ಈ ಯೋಜನೆಗೆ ಎರಡು ವರ್ಷದ ಹಿಂದೆ 8,000 ಕೋಟಿ ಯೋಜನೆ ವೆಚ್ಚವಾಗಿತ್ತು. ಆದರೆ ಯೋಜನೆ ಸಂಪೂರ್ಣಗೊಳ್ಳಬೇಕಾದರೆ ಸುಮಾರು 40.000 ಕೋಟಿ ಅವಶ್ಯಕವಾಗಿದೆ ಎಂಬುದಾಗಿ ತಜ್ಞರು ವಿವರಿಸಿದ್ದಾರೆ. 24 ಟಿಎಂಸಿ ನೀರು ದೊರೆಯುತ್ತದೆ ಎಂಬುದರ ಬಗ್ಗೆ ಯಾವುದೇ ಸಮೀಕ್ಷೆಯನ್ನು ಮಾಡದೇ ಯೋಜನೆಯನ್ನು ಆರಂಭಿಸಿರುವುದು ಅವೈಜ್ಞಾನಿಕವಾಗಿದೆ.

**ಯೋಜನೆ ಹೆಸರಿನಲ್ಲಿಯೇ ಸ್ಪಷ್ಟತೆ ಇಲ್ಲ**

ಈ ಯೋಜನೆಯ ಮೊದಲನೆಯ ಹೆಸರು ಸ್ಕೀಮ್ ಫಾರ್ ಪ್ಲೇಟ್ ವಾಟರ್ ಪ್ರಂ ಸಕಲೇಶಪುರದಿಂದ ಚಿಕ್ಕಬಳ್ಳಾಪುರ ಎಂಬುದು ಮೊದಲನೆಯ ಹೆಸರಾಗಿದೆ. ಎರಡನೆಯ ಹೆಸರು 'ಎತ್ತಿನಹೊಳೆ ರಿವರ್ ಡೈವೋಶನ್ ವಾಟರ್ ಇಂಟಗ್ರೇಟೆಡ್ ಡ್ರಿಂಕಿಂಗ್ ವಾಟರ್ ಪ್ರಾಜೆಕ್ಟ್'. ಮೂರನೆಯದಾಗಿ 'ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ'

**ಅಂತರ್‌ಜಲ ಮಟ್ಟ ಕುಸಿಯುತ್ತದೆ**

ಎತ್ತಿನಹೊಳೆ ಯೋಜನೆಯ ಕಾಮಗಾರಿಗೆ ಕಾಲುವೆಗಳನ್ನು ಜೋಡಿಸಲು ಸುಮಾರು 15ರಿಂದ 20 ಅಡಿ ಆಳ ಕಾಲುವೆಗಳನ್ನು ತೆಗೆಯುವುದರಿಂದ ಅಕ್ಕಪಕ್ಕದಲ್ಲಿರುವ ಚಿಕ್ಕಪುಟ್ಟ ಕಾಲುವೆಗಳು ಕೆರೆಕಟ್ಟೆಗಳು ಬತ್ತಿ ಹೋಗುವುದರ ಜೊತೆಗೆ ಅಂತರ್‌ಜಲ ಮಟ್ಟ ಕುಸಿಯುವುದರಲ್ಲಿ ಯಾವುದೇ ಸಂದೇಹವಿಲ್ಲವಾಗಿದೆ. ಸಣ್ಣಪುಟ್ಟ ಕಾಲುವೆಗಳು ಇದರಿಂದ ಬೇಸಿಗೆಯಲ್ಲಿ ಹರಿಯುದನ್ನೇ ನಿಲ್ಲಿಸುತ್ತವೆ. ಮಲೆನಾಡಿನ ಪ್ರದೇಶದಲ್ಲಿ ಬೋರ್‌ವೆಲ್ ಸಮಸ್ಯೆ ಇರಲಿಲ್ಲ. ಆದರೆ ಪ್ರಸ್ತುತ ಬೋರ್‌ವೆಲ್ ಸಮಸ್ಯೆ ದಿನ ದಿನಕ್ಕೆ ಹೆಚ್ಚಾಗುತ್ತಿದ್ದು,

ಭವಿಷ್ಯದಲ್ಲಿ ಹೆಚ್ಚು ಹೆಚ್ಚು ಸಮಸ್ಯೆ ಉದ್ಭವಿಸಿ ಈ ಎತ್ತಿನಹೊಳೆ ಯೋಜನೆಯಿಂದ ಸ್ಥಳೀಯ ಜನರಿಗೆ ತುಂಬಾ ತೊಂದರೆಯಾಗಿದೆ.

**ಪರಿಸರ ವಿಕೋಪವಾಗುವುದು**

ಪರಿಸರದಲ್ಲಿ ಅಸಮತೋಲನ ಉಂಟಾಗುತ್ತದೆ ಸಮತೋಲನವನ್ನು ಕಾಪಾಡಿಕೊಳ್ಳಲು ಸಾಧ್ಯವಾಗದೇ ಇರಬಹುದು. ಹೊಸ ಹೊಸ ರೀತಿಯ ಪ್ರಕೃತಿ ವಿಕೋಪಗಳು ಸೃಷ್ಟಿಯಾಗುವುದರಲ್ಲಿ ಸಂಶಯವಿಲ್ಲ

**ದ್ವಂದ್ವ ನೀತಿಯಾಗಿದೆ**

ಸರ್ಕಾರವು ಈ ಯೋಜನೆ ಕುಡಿಯುವ ನೀರಾವರಿ ಯೋಜನೆಯಾಗಿದೆ ಎಂಬುದಾಗಿ ವಿವರಿಸಿದೆ. ಆದರೆ ಪತ್ರಿಕೆಗಳು ಕೃಷಿಗೆ ನೀರಾವರಿ ಯೋಜನೆ ಎಂಬ ವರದಿಯನ್ನು ಮಾಡಲಾಗಿದೆ. ಈ ರೀತಿಯಿಂದಾಗಿ ದ್ವಂದ್ವತೆ ಹೆಚ್ಚಾಗುತ್ತಿದೆ.

**ನೀರಿನ ಮೇಲೆ ನಿರ್ಬಂಧ**

ಈ ಯೋಜನೆ ವ್ಯಾಪ್ತಿಯಲ್ಲಿ ಹರಿಯುವ ನದಿಗಳ ನೀರನ್ನು ಬಳಕೆ ಮಾಡಿಕೊಳ್ಳಬಾರದೆಂಬ ನಿರ್ಬಂಧವನ್ನು ಸ್ಥಳೀಯರಿಗೆ ನಿರ್ಬಂಧವನ್ನು ಹೇರಲಾಗಿದೆ. ಈ ರೀತಿ ಯಿಂದಾಗಿ ಆಲೂರು ತಾಲೂಕಿನಲ್ಲಿ ಕೃಷಿಯ ಜೊತೆಗೆ ಕುಡಿಯುವ ನೀರಿನ ಸಮಸ್ಯೆ ಭವಿಷ್ಯದಲ್ಲಿ ಉದ್ಭವಿಸಬಹುದು.

**ಜನಸಂಖ್ಯೆ ಹೆಚ್ಚಳ**

ಆಲೂರು ತಾಲ್ಲೂಕಿನಲ್ಲಿ ಜನಸಂಖ್ಯೆಯನ್ನು ಗಮನಿಸಿದಾಗ ಪ್ರಾರಂಭದ ಅವಧಿಗಿಂತ ಪ್ರಸ್ತುತವಾಗಿ ಜನಸಂಖ್ಯೆ ಹೆಚ್ಚಳವಾಗಿದೆ. ಈ ರೀತಿಯ ಜನಸಂಖ್ಯೆ ಬೆಳವಣಿಗೆಯಿಂದ ಭವಿಷ್ಯದಲ್ಲಿ ನೀರಿನ ಅವಶ್ಯಕತೆ ಇದೆ ಆದ್ದರಿಂದ ಈ ಯೋಜನೆ ರೂಪಿಸಿರುವುದು ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

**ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆಗಳಿಗೆ ವಿರೋಧ**

ಎತ್ತಿನಹೊಳೆ ಯೋಜನೆಯ ಕಾಮಗಾರಿ ಆರಂಭಗೊಂಡಿದ್ದರೂ. ಸಹ ಭೂಸ್ವಾಧೀನ ಪ್ರಕ್ರಿಯೆಯಾಗಿಲ್ಲ. ಈ ಯೋಜನೆಯಿಂದ ಯಾರ ಯಾರ ಜಮೀನು ಎಷ್ಟು ಹೋಗುತ್ತದೆ ಎಂಬುದರ ಬಗ್ಗೆ ಸರ್ಕಾರ ಯಾವುದೇ ಮಾಹಿತಿ ಸಲಹೆ ಸೂಚನೆಗಳನ್ನು ನೀಡಿಲ್ಲವೆಂಬದು ಇವರುಗಳ ವಾದವಾಗಿದೆ. ಸರ್ಕಾರದಿಂದ ಯಾವುದೇ ಮಾರ್ಗದರ್ಶನಗಳ ಇದುವರೆಗೆ ದೊರೆತಿಲ್ಲ. ಗೆಜೆಟೆಡ್ ನೋಟಿಫಿಕೇಶನ್ ಮಾಡದೇ ಲ್ಯಾಂಡ್ ಹೋಲ್ಡರ್ಸ್ ಹತ್ತಿರ ಒಪ್ಪಂದವನ್ನು ಮಾಡಿಕೊಂಡು ಕಾನೂನು ಭಾಹಿರವಾಗಿ ಭೂಮಿಯನ್ನು ಪಡೆಯುವುದರ ಜೊತೆಗೆ ಸ್ವಲ್ಪ ಹಣವನ್ನು ನೀಡಿ ಭೂ ಕಾಯ್ದೆಯ ಅಡಿ ಭೂಮಿಯನ್ನು ಪಡೆಯದೆ ಕಾನೂನುಬಾಹಿರವಾಗಿ ಖಾಸಗಿ ಒಪ್ಪಂದವನ್ನು ಮಾಡಿಕೊಂಡು ಕಾಮಗಾರಿಯನ್ನು ಪ್ರಾರಂಭಿಸಿದ್ದಾರೆ.

**2013ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಪರಿಹಾರ ನೀಡಬೇಕು**

ಸರ್ಕಾರ ಈ ಕಾಯ್ದೆಯ ಅನ್ವಯ ಸಂತ್ರಸ್ತರಿಗೆ ಪರಿಹಾರ ನೀಡಬೇಕು. ಆದರೆ ಸರ್ಕಾರ ಇದರ ಬಗ್ಗೆ ಗಮನವನ್ನು ಹರಿಸದೆ ಟೆಂಡರ್ ದಾರರಿಗೆ ಕೆಲಸ ಮಾಡಲು ಸೂಚಿಸುತ್ತಿದೆ. ಇದು ಕಾನೂನು ಬಾಹಿರವಾಗಿದೆ ಎಂಬುದು ಸಂತ್ರಸ್ಥರ ವಾದವಾಗಿದೆ.

**ಪರ್ಯಾಯ ಭೂಮಿ ನೀಡಿಲ್ಲ**

ಸರ್ಕಾರ ಈ ಯೋಜನೆಯ ಸಂತ್ರಸ್ತರು ಯಾರೆಂದು ನಿಖರವಾಗಿ ಅಥವಾ ಸ್ಪಷ್ಟವಾಗಿ ಗುರುತಿಸಿಲ್ಲ. ಪರಿಹಾರವನ್ನು ಹಣದ ರೂಪದಲ್ಲಿ ನೀಡುತ್ತೇವೆ ಎನ್ನುವ ಮಾಹಿತಿ ಇದೆಯೇ ವಿನಹ ಪರ್ಯಾಯ ಇಡುವಳಿ ಭೂಮಿಯು ನೀಡುವುದರ ಬಗ್ಗೆ ಸ್ಪಷ್ಟತೆ ಇಲ್ಲ.

**ರಾಜಕೀಯದ ಬಗ್ಗೆ ಸಂತ್ರಸ್ತರ ಅಸಮಾಧಾನ**

ರಾಜಕೀಯ ನಾಯಕರು ತಮ್ಮ ಮತ ಕ್ಷೇತ್ರವನ್ನು ಗಟ್ಟಿ ಮಾಡಿಕೊಳ್ಳಲು ರಾಜಕೀಯ ಪ್ರೇರಿತವಾಗಿ ಯೋಜನೆಯನ್ನು ಅನುಷ್ಠಾನ ಮಾಡಲು ಹೊರಟ್ಟಿದ್ದಾರೆ ಇದರ ಮಧ್ಯ ಸಾಮಾನ್ಯ ಜನತೆಯನ್ನು ದಾರಿ ತಪ್ಪಿಸಿ ಸಮಸ್ಯೆಯನ್ನು ಸೃಷ್ಟಿ ಮಾಡುತ್ತಿದ್ದಾರೆ ಎಂಬುದು ಸಂತ್ರಸ್ತರ ಅಭಿಪ್ರಾಯವಾಗಿದೆ. ಸಾಮಾನ್ಯ ಜನತೆಯನ್ನು ದಾರಿ ತಪ್ಪಿಸಿ ಸಮಸ್ಯೆಯನ್ನು ಸೃಷ್ಟಿ ಮಾಡುತ್ತಿದ್ದಾರೆ ಕೆಲವು ರಾಜಕಾರಣಿಗಳು ಇಡೀ ತಮ್ಮ ರಾಜಕಾರಣವನ್ನು ಇಂತಹ ನೀರಾವರಿ ಯೋಜನೆಗಳಿಂದ ನಿರಂತರವಾಗಿ ಪೂರೈಕೆಯಾಗುವ ಹಣದಿಂದಲೇ ಅಕ್ರಮ ನಡೆಸಿಕೊಂಡು ಬರುತ್ತಿದ್ದಾರೆ ಎಂಬ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜನ ಪ್ರತಿನಿಧಿಗಳು ಇದರ ಸಾಧಕ ಬಾದಕಗಳನ್ನು ಕೂಲಂಕುಶವಾಗಿ ಸಚಿವ ಸಂಪುಟದಲ್ಲಿ ಚರ್ಚಿಸಿ ನಿರ್ಧಾರವನ್ನು ತೆಗೆದುಕೊಳ್ಳುವ ಬದಲಾಗಿ ಅಮಾಯಕ ಜನರನ್ನು ಬೀದಿಗೆ ತಳ್ಳಿದ್ದಾರೆ.

**ಸಲಹೆಗಳು**

•ಎತ್ತಿನಹೊಳೆ ನಿರಾಶ್ರಿತರಿಗೆ ಸೂಕ್ತ ನ್ಯಾಯವನ್ನು ಒದಗಿಸಿಕೊಡಬೇಕು.

•ಪರಿಸರದ ಬಗ್ಗೆ ಕಾಳಜಿ ವಹಿಸಬೇಕು.

•ಎತ್ತಿನಹೊಳೆ ಯೋಜನೆಯ ಉದ್ದೇಶವನ್ನು ದ್ವಂದ್ವ ನೀತಿಗೆ ಬದಲಾಗಿ ಜನತೆಗೆ ಸ್ಪಷ್ಟತೆಯನ್ನು ನೀಡಬೇಕು.

•ಜೀವ ವೈವಿಧ್ಯತೆಯ ರಕ್ಷಣೆಗೆ ಗಮನವನ್ನು ನೀಡಬೇಕು

•ಈ ಯೋಜನೆಯ ವ್ಯಾಪ್ತಿಯಲ್ಲಿ ಸಾಮಾಜಿಕ ಅಧ್ಯಯನಗಳು ನಡೆಯಬೇಕು.

•ಜೀವವೈವಿಧ್ಯತೆಯ ತಾಣವಾಗಿರುವ ಪಶ್ಚಿಮ ಘಟ್ಟವನ್ನು ರಕ್ಷಿಸಬೇಕು.

•ಐದು ಜಿಲ್ಲೆಗಳಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಮತ್ತು ಅಂತರ್ಜಲ ಮಟ್ಟವನ್ನು ವೃದ್ಧಿಸುವ ಕಾರ್ಯ ಮಾಡಬೇಕಾಗಿದೆ.

•ಎತ್ತಿನ ಹೊಳೆ ಯೋಜನೆಯಿಂದ ನಿರಾಶ್ರಿತರಿಗೆ ಸೂಕ್ತ ಸಹಾಯಧನ ಮತ್ತು ಅವರುಗಳ ಬೇಡಿಕೆಗೆ ಶೀಘ್ರವಾಗಿ ಸ್ಪಂದಿಸುವುದು.

**ಉಪಸಂಹಾರ**

ಎತ್ತಿನಹೊಳೆ ನೀರಾವರಿ ಯೋಜನೆಯಿಂದ ಸಂತ್ರಸ್ಥರ ಸಮಸ್ಯೆಗಳು ಮತ್ತು ಸಸ್ಯ ಸಂಪತ್ತಿಗೆ ಪ್ರಾಣಿಗಳಿಗೆ ಹೆಚ್ಚು ತೊಂದರೆಯಾಗುತ್ತದೆ ಅಳಿವಿನಂಚಿನಲ್ಲಿರುವ ಜೀವವೈವಿಧ್ಯತೆ ಸಂಪೂರ್ಣವಾಗಿ ನಶಿಸಿ ಹೋಗಬಹುದು ಎತ್ತಿನ ಹೊಳೆ ಯೋಜನೆಯಿಂದ ಪರಿಸರ ನಾಶದ ಪ್ರಮಾಣ ಹೆಚ್ಚಾಗುತ್ತದೆ. ಗುಡ್ಡಗಳನ್ನು ಬಗೆದು ಈ ಯೋಜನೆಯ ವ್ಯಾಪ್ತಿಯನ್ನು ರಚಿಸಿಕೊಳ್ಳುವುದರಿಂದ ಮಣ್ಣು ಮೆದುವಾಗಿ ಭೂ ಸವಕಳಿ ಉಂಟಾಗುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ ಎತ್ತಿನಹೊಳೆ ಯೋಜನೆಯಿಂದ ನಿರೀಕ್ಷೆ ಮಾಡಿದಷ್ಟು ಜಲಸಂಗ್ರಹವಾಗದಿದ್ದರೂ ಸಹ ಒಂದಿಷ್ಟು ಪ್ರಮಾಣದ ನೀರು ದೊರೆಯುವುದರಲ್ಲಿ ಸಂಶಯವಿಲ್ಲ ಆದರೆ ಕರ್ನಾಟಕ ಸರ್ಕಾರ ಸೂಕ್ತವಾದ ನೀತಿ ನಿಯಮಗಳನ್ನು ಮತ್ತು ಸಂತ್ರಸ್ತರು ಯಾರೆಂದು ತಿಳಿಯುವ ಕಾರ್ಯಕ್ಕೆ ಮುಂದಾಗಬೇಕು.

ಎತ್ತಿನಹೊಳೆ ನೀರಾವರಿ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ಥರು ಮತ್ತು ಅವರ ಸಾಮಾಜಿಕ ಆರ್ಥಿಕ ದುಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ.

ಎತ್ತಿನಹೊಳೆ ಯೋಜನೆಯನ್ನು ಸಮರ್ಥಿಸಿಕೊಳ್ಳುವುದಕ್ಕಿಂತ ಒಂದಲ್ಲ ಒಂದು ವಿಷಯದಲ್ಲಿ ವಿರೋಧಿಸುವುದೇ ಹೆಚ್ಚಾಗಿ ಕಂಡುಬಂದಿದೆ. ಯೋಜನೆಯಿಂದ ಪರಿಸರ ನಾಶ ಮಾಡುವುದರ ಬಗ್ಗೆ ಜೀವವೈವಿಧ್ಯತೆಗೆ ಹೆಚ್ಚು ಸಮಸ್ಯೆಯಾಗುತ್ತದೆ. ಜೀವಿಗಳ ಸಂತತಿ ಅವನತಿಯಾಗುವುದರಲ್ಲಿ ಸಂಶಯವಿಲ್ಲ. ಸ್ಥಳೀಯ ಕುಲಕಸುಬು ಅವನತಿ ಹೊಂದುತ್ತಿವೆ. ಹೆಚ್ಚಿನ ಕೃಷಿ ಭೂಮಿ ವಿನಾಶ ವಾಗುತ್ತಿದೆ.ಬದಲಿ ಭೂಮಿ ಕೊಂಡುಕೊಳ್ಳಲು ಸಂತ್ರಸ್ಥರಿಂದ ಸಾಧ್ಯವಾಗುತ್ತಿಲ್ಲ. ಸರ್ಕಾರ ಹಸಿರು ಪೀಠದಿಂದ ಸಮ್ಮತಿಯನ್ನು ಪಡೆಯಲು ಕುಡಿಯುವ ನೀರಿನ ಯೋಜನೆ ಎಂದು ಹೇಳಿಕೊಂಡಿದೆ. ವನ್ಯಜೀವಿ ಮತ್ತು ಕಾಡು ಪ್ರಾಣಿಗಳ ಸಂಘರ್ಷ ಹೆಚ್ಚಳವಾಗುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ರಾಜ್ಯ ಸರ್ಕಾರ ಆಯವ್ಯಯದಲ್ಲಿ ಬಿಡುಗಡೆ ಮಾಡಿದ ಹಣದ ಬಗ್ಗೆ ಮಾಹಿತಿ ದೊರೆಯದೆ ಸಂತ್ರಸ್ಥರು ಗೊಂದಲಕ್ಕೆ ಒಳಗಾಗಿದ್ದಾರೆ ಅನೇಕ ಸಂತ್ರಸ್ಥರ ಬೇಡಿಕೆಗೆ ಸರ್ಕಾರ ಮನ್ನಣೆ ನೀಡಿಲ್ಲದಿರುವುದರಿಂದ ಹಾಗೂ ಮನ್ನಣೆ ಇಲ್ಲ ಎಂಬುದು ತಿಳಿದು ಬಂದಿದೆ. ಸಂತ್ರಸ್ತರಿಗೆ ಸಹಾಯಧನ ಮೂಲಭೂತ ಸೌಕರ್ಯ ನೀಡಿದಲ್ಲದಿರುವುದರಿಂದ ಇವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಚಿಂತಾಜನಕವಾಗುತ್ತಿರುವುದು ನಾಗರೀಕ ಸಮಾಜದ ಲಕ್ಷಣವಲ್ಲ.

## ಆಧಾರ ಗ್ರಂಥಗಳು


1. ಡಾ.ರಂಗನಾಥ: ಭಾರತದ ಪ್ರಾದೇಶಿಕ ಮತ್ತು ಆರ್ಥಿಕ ಭೂಗೋಳಶಾಸ್ತ್ರ, ವಿದ್ಯಾನಿಧಿ ಪ್ರಕಾಶನ ಗದಗ 582101. ಪುಟ ಸಂಖ್ಯೆ 205–228
2. ಡಾ.ಎಚ್‌ಆರ್.ಕೃಷ್ಣಯ್ಯಗೌಡ ಗ್ರಾಮೀಣಾಭಿವೃದ್ಧಿ.ವಿದ್ಯಾನಿಧಿ ಪ್ರಕಾಶನ ಗದಗ. ಪುಟ ಸಂಖ್ಯೆ 528–101
3. ಎಸ್.ಶರಣಪ್ಪ ಭಾರತದ ಆರ್ಥಿಕ ಸಮಸ್ಯೆಗಳು. ನರೇಂದ್ರ ಪ್ರಕಾಶನ. 2052/1.2 ನೇ ಮುಖ್ಯರಸ್ತೆ ದಾವಣಗೆರೆ. ಹರ್ಷ ಪ್ರಿಂಟರ್ಸ್ ಮೈಸೂರು. ಪುಟ ಸಂಖ್ಯೆ 123–125


**ದಿನಪತ್ರಿಕೆಗಳಿಂದ ಸಂಗ್ರಹ ಮಾಹಿತಿ**


- ಪ್ರಜಾವಾಣಿ
- ಉದಯವಾಣಿ
- ಅಂತರ್ಜಾಲದಿಂದ ಮಾಹಿತಿ
- www.Yetinahole yojane.com
- www.Publictv.com